*ಎಂ.ಜಿ. ಶಿವರಾಂ, ಬೆಂಗಳೂರು*

*ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತಿದೆ ಎಂದು ವೃತ್ತಪತ್ರಿಕೆಗಳು ಸಂಪಾದಕೀಯವನ್ನು ಬರೆಯುತ್ತಿವೆ; ಇದನ್ನು ತಡೆಯುವುದು ಹೇಗೆ?*



ಅದಕ್ಕೇಕೆ ಮಂಡೆ ಬಿಸಿ? ಸಂಪಾದಕೀಯವನ್ನು ಓದದಿದ್ದರಾಯ್ತು!

*ವಿ.ಎಸ್.ಅವಧಾನಿ, ಹೊನ್ನಾವರ*

*ಪಾದಯಾತ್ರೆ ಮತ್ತು ತೀರ್ಥಯಾತ್ರೆಗಳ ನಡುವಿನ ಅಂತರವೇನು?*

ನಡು ನೆಟ್ಟಗಿದ್ದಾಗ ಪಾದಯಾತ್ರೆ, ನಡು ಬಾಗಿದಾಗ ತೀರ್ಥಯಾತ್ರೆ!

*ಓಂಕುಮಾರ್, ಬೀದರ್*

*ಬದುಕಿನಲ್ಲಿ ಅತಿ ಪ್ರಮುಖವಾದ ಘಟ್ಟ ಯಾವುದು ಸ್ವಾಮಿ?*

ಸ್ನಾನಘಟ್ಟ!

*ಕೆ. ಮೈಥಿಲಿಕೃಷ್ಣ, ಬೆಂಗಳೂರು*

*ನೀವು ಯಾವಾಗ, ಹೇಗೆ ಸಾಯಬಯಸುತ್ತೀರ?*



ಏಕೆ? ನನ್ನ ಉತ್ತರಗಳನ್ನು ಓದಿ ಕೊಲ್ಲಬೇಕೆನ್ನಿಸಿದೆಯೇನು?

*ಹಾಡ್ಯ ಜಯಾನಂದ, ಮೈಸೂರು*

*ನ್ಯಾಯದೇವತೆಯ ಕಣ್ಣಿಗೆ ಕಟ್ಟಿರುವ ಬಟ್ಟೆಯನ್ನು ತೆಗೆದರೆ ಏನಾಗಬಹುದು?*

ಕೆಲವು ವಕೀಲರನ್ನು ಕಂಡಾಕ್ಷಣ ನ್ಯಾಯದೇವತೆ ಕಣ್ಮುಚ್ಚಬಹುದು!

*ವಿದ್ಯಾವತಿ ಮಾಧವ ಶ್ಯಾನುಭಾಗ, ಕುಂದಾಪುರ*

*ದ್ರೌಪದಿಯು ಪಾತ್ರೆ ಸರಿಯಾಗಿ ತೊಳೆಯದ್ದರಿಂದ ದೂರ್ವಾಸರಿಗೆ ತೃಪ್ತಿಪಡಿಸಲಾಯಿತಂತೆ...?*

ಅಗುಳು ಉಂಡ ಮನೆಗೆ ನೂರು ಭಕ್ಷ್ಯ ನೀಡುವ ಕೃಷ್ಣನಿದ್ದರೆ ಯಾರೂ ಪಾತ್ರೆ ತೊಳೆಯುತ್ತಲೇ ಇರಲಿಲ್ಲ!

*ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು*

*ರಾಜಕೀಯದಲ್ಲಿ ಯಾರ್‍ಯಾರು ಎಷ್ಟೆಷ್ಟು ಕ್ಯಾರೆಟ್ ಎಂದು ಹೇಳಕ್ಕಾಗುತ್ತಾ?*

ಕ್ಯಾರೆಟ್ ಹೇಳಲಾಗದು, ಕ್ಯಾ ರೇಟ್ ಎಂದರೆ ಹೇಳಬಹುದು!

*ಎಂ.ಎನ್.ಸೋಮಶೇಖರ್, ಮೈಸೂರು*

*ದೇವತೆಗಳಿಗೆ ಮಾನವನ ಆಕಾರವೇ ಏಕೆ ಇದೆ?*

ಬೇರೆ ಆಕಾರದಲ್ಲಿದ್ದರೆ ಮಾನವನಿಗೆ ಗುರುತು ಸಿಗುವುದಿಲ್ಲವಂತೆ!

*ಕೆ.ಎಸ್. ಕನಕಾಂಬಿಕ, ಶಂಕರಘಟ್ಟ*

*ರಾಜಕೀಯ ಎಂಬ ಹೊಳೆಯಲ್ಲಿ ಈಜು ಕಲಿಯಲು ಏನು ಮಾಡಬೇಕು?*

ಹಣದ ಹೊಳೆಯಲ್ಲಿ ಇತರರನ್ನು ಮೊದಲು ಈಜಿಸಬೇಕು!

*ಮಹೇಶ್ ಹೆಗಡೆ, ಹೆಗ್ಗೆ*

*ಸುಳ್ಳು ಹೆಣ್ಣಿನ ಸಹಜ ಕಲೆ; ಗಂಡಿನ ಸಹಜ ಕಲೆ ಯಾವುದು?*

ಆ ಸುಳ್ಳನ್ನು ನಂಬಿದಂತೆ ನಟಿಸುವುದು!

*ಪದ್ಮಜಾ ಸುಂದರೇಶ್, ಮೈಸೂರು*

*ಕನ್ನಡಭಾಷೆಯ ಸಿನಿಮಾಗಳಿಗೆ ಅನ್ಯ ಭಾಷೆಗಳ ಹೆಸರುಗಳನ್ನು ಇಡುವುದೇಕೆ?*

ಹಾಳಾದರೆ ಅನ್ಯಭಾಷೆಯ ಹೆಸರು ಹಾಳಾಗಲೆಂದು!

*ಎಂ.ಎಸ್.ಗುರುರಾಜಾಚಾರು, ಬಳ್ಳಾರಿ*

*ಕೆಟ್ಟವರು ಮುಂದೆ ಬರುತ್ತಾರೆ, ಒಳ್ಳೆಯವರು ಹಿಂದೆ ಬರುತ್ತಾರೆ, ರಾಜಕೀಯ ನಾಯಕರು?*

ಕೆಟ್ಟವರೇ ಬೇರೆ, ರಾಜಕಾರಣಿಗಳೇ ಬೇರೆಯೇ...? ಹುಚ್ಚಪ್ಪ!

*ಕೆ.ಜಿ. ಶೇಖರಪ್ಪ, ಸಿರಿಗೆರೆ*

*ನ್ಯಾಯ, ನೀತಿ, ಪ್ರಾಮಾಣಿಕತೆಯ ವ್ಯಕ್ತಿಗಳಿಗೆ ನಿಮ್ಮ ಕಾಣಿಕೆ ಏನು ಸ್ವಾಮಿ?*

ಏನಿಲ್ಲಪ್ಪ! ಕಾಣಿಕೆ ನೀಡಲು ಹೋದರೆ ಲಂಚ ನೀಡಬಯಸಿದೆನೆಂದು ಬೈದರವರು!

*ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ*

*ನಮ್ಮ ಜೀವನದಲ್ಲಿ ಜ್ಞಾಪಿಸಿಕೊಳ್ಳಲೇಬೇಕಾದ ಹಾಗೂ ಮರೆಯಲೇಬೇಕಾದ ವಿಷಯ ಯಾವುದು ಸಾರ್?*

ಹೆಂಡತಿಯ ಜನ್ಮದಿನ ಮತ್ತು ಮದುವೆಯಾದ ದಿನ!

## ಬಹುಮಾನಿತ ಪ್ರಶ್ನೆ

*ಎಂ. ಸರ್ದಾರ್, ಅರಸೀಕೆರೆ*

*ಶಾಶ್ವತವಾಗಿ ನಂಬರ್ 1 ಸ್ಥಾನವನ್ನು ಕಾಯ್ದುಕೊಳ್ಳಲು ಸಾಧ್ಯವೆ?*

ಸಾಧ್ಯ! ಕೇವಲ ಸಂಖ್ಯೆ ಒಂದಕ್ಕೆ ಮಾತ್ರ!

*ರಾಮಲಿಂಗಯ್ಯ ಶಿದ್ದಯ್ಯಸ್ವಾಮಿ, ಗಬ್ಬೂರು*

*ಹಾಲನ್ನು ಲೀಟರ್‌ನಿಂದ, ಬಟ್ಟೆಯನ್ನು ಮೀಟರ್‌ನಿಂದ ಅಳೆದರೆ, ಪ್ರೀತಿಯನ್ನು?*

ಕಣ್ಣಲ್ಲಿ ಹೊಳೆವ ಪ್ರೇಮದ ವ್ಯಾಟ್ ಪವರ್‌ನಿಂದ!

*ಹರಳಹಳ್ಳಿ ಪುಟ್ಟರಾಜು, ಪಾಂಡವಪುರ*

*ನೋವು ಅನುಭವಿಸಿದರೇನೇ ಪ್ರೇಮದಲ್ಲಿ ರುಚಿ ಇರುತ್ತದೇಕೆ?*

ಸರಸದ ರುಚಿ ಹತ್ತಲು ವಿರಹವೇ appetizer ಅಂತೆ!

*ಎಂ.ವಿ. ವೆಂಕಮ್ಮ, ಬಳ್ಳಾರಿ*

*ನರಕದಲ್ಲಿ ಯಮನು ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಂಡರೆ?*



ಏನೀಗ? ಯಮನ ಅಣ್ಣಂದಿರಾದ ವೈದ್ಯರ ಪಡೆಯೇ ನಮ್ಮಲ್ಲಿದೆಯಲ್ಲ!

*ಎ. ರಾಜ್‌ಕುಮಾರ್, ಶ್ರೀನಿವಾಸಪುರ*

*ಶ್ರೀಮಂತಿಕೆಯನ್ನು ಹಣದಿಂದ ಅಳೆಯಲೋ, ಗುಣದಿಂದ ಅಳೆಯಲೋ?*

ಗುಣದಿಂದ; ಹಣದಿಂದ ಅಳೆಯಲು ಇನ್‌ಕಂ ಟ್ಯಾಕ್ಸ್ ಇಲಾಖೆಯೇ ಇದೆ!

*ವಿ. ಹಮೀದ್, ವಿಟ್ಲ*

*ಗೆಳೆಯರಿಲ್ಲದ ಬಾಳು ಹೇಗಿರುತ್ತೆ ರಾಮ್‌ಜೀ?*

ಷುಗರ್‌ಲೆಸ್ ಕಬ್ಬಿನಂತೆ!

*ಮಹೇಶ್ ಕೆ. ವಿಭೂತಿ, ಹರಿಹರ*

*ವಿದ್ಯೆ ಮತ್ತು ವಿನಯ ಒಟ್ಟಿಗಿರಲು ಸಾಧ್ಯವೆ?*

ಸಾಧ್ಯ; ಅಂತೆಯೇ ದುರ್ವಿದ್ಯೆ ಮತ್ತು ದುರ್ವಿನಯ ಸಹ!

■ ರಾಮ್